# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:** | 133 |
| **ಮಾನ್ಯ ಸದಸ್ಯರ ಹೆಸರು:** | ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ:** | 11.08.2025 |
| **ಉತ್ತರಿಸುವ ಸಚಿವರು:** | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ವಿವಿಧ ಭಾಗದಿಂದ ಬರುವ ಮೀನುಗಳಿಗೆ ಮನುಷ್ಯನ ಮೇಲೆ ಭಯಾನಕ ಪರಿಣಾಮ ಬೀರುವಂತಹ ಫಾರ್ಮಾಲಿನ ದ್ರಾವಣ ಸಿಂಪಡಿಸಿ ಮೀನುಗಳನ್ನು ಮಾರಾಟ ಮಾಡುವವರನ್ನು ಸರ್ಕಾರ ಪತ್ತೆ ಹಚ್ಚಿದೆಯೇ; | ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಗೆ ಸರಬರಾಜಾಗುವ ತಾಜಾ ಮೀನುಗಳಿಗೆ ಫಾರ್ಮಾಲಿನ್ ದ್ರಾವಣ ಬಳಸುವ ಕುರಿತಂತೆ ಆಹಾರ ಮಾದರಿಗಳನ್ನು ವಿಶ್ಲೇಷಣೆಗೊಳಪಡಿಸಲಾಗಿದ್ದು, ಯಾವುದೇ ಪ್ರಕರಣಗಳು ಪತ್ತೆಯಾಗಿರುವುದಿಲ್ಲ. |
| ಆ | ನಗರಕ್ಕೆ ಬಂದ ತಕ್ಷಣ ಅವುಗಳನ್ನು ಪತ್ರಿನಿತ್ಯ ಪರಿಶೀಲನೆಗೆ ಒಳಪಡಿಸಲು ಸರ್ಕಾರ ವಿಶೇಷ ತಂಡ ರಚಿಸಲು ಮುಂದಾಗುವುದೆ; | ತಾಜಾ ಮೀನಿನ ಸರಬರಾಜುದಾರರು, ಸಾಗಾಟ ಮಾಡುವವರು ಮತ್ತು ಮಾರಾಟಗಾರರು ತಾಜಾ ಮೀನಿಗೆ Food Safety and Standards (Food Products Standards and Food Additives) Regulations, 2011 8 Appendix-A, Table-9 ರಲ್ಲಿ ನಿಗದಿಪಡಿಸಿರುವಂತೆ ಯಾವುದೇ Additives ಗಳನ್ನು ಬಳಸುವಂತಿರುವುದಿಲ್ಲ. ಸದರಿ ಅಂಶವು ಸೇರಿದಂತೆ ಆಹಾರ' ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ಅನುಷ್ಠಾನ ಕುರಿತಂತೆ ಪರಿಶೀಲಿಸಲು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಆಹಾರ ಸುರಕ್ಷತಾ ವಿಭಾಗದಡಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಅಂಕಿತಾಧಿಕಾರಿಗಳು ಮತ್ತು ತಾಲ್ಲೂಕುಗಳಲ್ಲಿ ಆಹಾರ ಸುರಕ್ಷತಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. |
| ಇ | ಈ ಭಯಾನಕ ಫಾರ್ಮಾಲಿನ ದ್ರಾವಣ ಸಿಂಪಡಣೆ ಮಾಡುವುದನ್ನು ಕಟ್ಟು ನಿಟ್ಟಾಗಿ ನಿಷೇಧಿಸಲು ಎಷ್ಟು ಮೀನಿನ ಅಂಗಡಿಗಳ ಮೇಲೆ | ತಾಜಾ . ಮೀನುಗಳನ್ನು ಕೆಡದಂತಿಡಲು ಫಾರ್ಮಾಲಿನ್ ದ್ರಾವಣ ಬಳಸುವ ಕುರಿತಂತೆ 2024-25ನೇ ಸಾಲಿನಲ್ಲಿ 96 ಮೀನಿನ ಅಂಗಡಿಗಳನ್ನು ಪರಿಶೀಲಿಸಿ 96 ತಾಜಾ ಮೀನಿನ |

| | | |
|---|---|---|
| | ಅಧಿಕಾರಿಗಳು ದಾಳಿ ನಡೆಸಿ ಸ್ಯಾಂಪಲ್ ಕಲೆಕ್ಟ್ ಮಾಡಿ ಪ್ರಯೋಗಾಲಕ್ಕೆ ಕಳುಹಿಸಲಾಗಿದೆ; | ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯದಲ್ಲಿ ವಿಶ್ಲೇಷಣೆಗೊಳಪಡಿಸಲಾಗಿರುತ್ತದೆ. ಎಲ್ಲಾ ಮಾದರಿಗಳು ಸುರಕ್ಷಿತ ಎಂದು ವರದಿಯಾಗಿದ್ದು, ಯಾವುದೇ ಮಾದರಿಗಳಲ್ಲಿ ಫಾರ್ಮಾಲಿನ್ ಅಂಶವು ಪತ್ತೆಯಾಗಿರುವುದಿಲ್ಲ. |
| ಈ | ಅವುಗಳ ವರದಿಯ ಪ್ರಮುಖ ಅಂಶಗಳೇನು; ತಪ್ಪಿತಸ್ಥರ ಮೇಲೆ ಕೈಗೊಂಡ ಕ್ರಮಗಳೇನು? | 2024-25ನೇ ಸಾಲಿನಲ್ಲಿ 96 ತಾಜಾ ಮೀನಿನ ಮಾದರಿಗಳನ್ನು ಪ್ರಯೋಗಾಲಯದಲ್ಲಿ ವಿಶ್ಲೇಷಣೆಗೊಳಪಡಿಸಲಾಗಿದ್ದು, ಎಲ್ಲಾ ಮಾದರಿಗಳು ಸುರಕ್ಷಿತ ಎಂದು ವರದಿಯಾಗಿರುತ್ತವೆ. ಯಾವುದೇ ಮಾದರಿಗಳಲ್ಲಿ ಫಾರ್ಮಾಲಿನ್ ಅಂಶವು ಪತ್ತೆಯಾಗಿರುವುದಿಲ್ಲ. |

**ಸಂಖ್ಯೆ: ಆಕುಕ 125 ಎಸ್‌ಬಿವಿ 2025**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**